ದಿನಾಂಕಃ **24.06.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ-5 ಪರ ಶ್ರೀ ಕೆ.ಕೆ.ಜಿ. ವಕೀಲರಿಂದ ಃ**

01. ಹನುಮೇಗೌಡರು 1984 ನೇ ಸಾಲಿನಲ್ಲಿ ತೀರಿಕೊಂಡಿರಬಹುದು, ಸರಿಯಾದ ಮಾಹಿತಿ ಇಲ್ಲ. ಅವರ ಮರಣ ಪ್ರಮಾಣ ಪತ್ರವನ್ನು ಹಾಜರುಮಾಡಲಾಗುವುದಿಲ್ಲ. ದಾವಾ ಸ್ವತ್ತು ಹನುಮೇಗೌಡರವರಿಗೆ ಸೇರಿದ್ದು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಮಾಡಿಲ್ಲ. ದಾವಾ ಸ್ವತ್ತು ನಮ್ಮ ಪಿತ್ರಾರ್ಜಿತ ಸ್ವತ್ತಲ್ಲ ಮತ್ತು ಅದು ಹನುಮೇಗೌಡರಿಗೆ ಸೇರಿರುವುದಿಲ್ಲ, ಆ ಕಾರಣ ಅದಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. 2006 ನೇ ಸಾಲಿನಲ್ಲಿ ನನಗೆ 22 ವರ್ಷ ವಯಸ್ಸಾಗಿತ್ತು. ಎಫ್.ಡಿ.ಪಿ.-1/2001 ರಲ್ಲಿ ನಾವುಗಳು ವಯಸ್ಕರು ಎಂದು ಹೇಳುತ್ತ ಅರ್ಜಿಯನ್ನು ಸಲ್ಲಿಸಿ ಕೇಸ್ ಅನ್ನು ಮುಂದುವರೆಸಿ ಎಂದು ಮನವಿ ಮಾಡಿರುವುದಿಲ್ಲ. ಎಫ್.ಡಿ.ಪಿ.-1/2001 ನ್ನು ನಾವು ಸುಮ್ಮನೆ ದಾಖಲು ಮಾಡಿದ್ದು, ನಾನು ವಯಸ್ಕನಾದರೂ ಸಹ ಸದರಿ ಕೇಸಿನಲ್ಲಿ ನಾನು ಖುದ್ದಾಗಿ ಭಾಗವಹಿಸಿಲ್ಲ ಎಂದರೆ ಸಾಕ್ಷಿಯು ಆ ಸಮಯದಲ್ಲಿ ನಾನು ವಿದ್ಯಾಭ್ಯಾಸ ಮಾಡುತ್ತಿದ್ದ ಕಾರಣ ನನ್ನ ತಾಯಿ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ನಾನು ವಯಸ್ಕನಾದ ನಂತರ ಅದನ್ನು ನ್ಯಾಯಾಲಯಕ್ಕೆ ತಿಳಿಸುವ ಜವಬ್ದಾರಿ ಇತ್ತು ಎಂದರೆ ಸಾಕ್ಷಿಯು ಆ ಕಾಲಕೆ ನನಗೆ ಮಾಹಿತಿ ಇರಲಿಲ್ಲ, ಸದರಿ ಕೇಸ್ ಅನ್ನು ತಾಯಿ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ.

2. ನಿಡಿ-16 ಕಂದಾಯ ದಾಖಲೆ 1989-90 ರಲ್ಲಿ ಸದರಿ ದಾಖಲೆ ಚಂದ್ರೇಗೌಡ ಅಂದರೆ 2 ನೇ ಪ್ರತಿವಾದಿಯವರ ಹೆಸರಿನಲ್ಲಿ ಇತ್ತು. ನಿಡಿ-16 ರಲ್ಲಿ ಕಾಣುವ ಸ್ವತ್ತನ್ನು ಚಂದ್ರೇಗೌಡರು ಬಾಕಿ ಉಳಿಸಿದ್ದ ಹಣವನ್ನು ಕೊಡದೇ ಇದ್ದ ಕಾರಣ ನ್ಯಾಯಾಲಯದಲ್ಲಿ ಹರಾಜು ಮಾಡುವ ಮೂಲಕ ಅದನ್ನು ಮಾರಾಟ ಮಾಡಲಾಗಿತ್ತು ಎಂದರೆ ಸರಿಯಲ್ಲ. ಚಂದ್ರೇಗೌಡರಿಗೆ ದಾವಾ ಸ್ವತ್ತು ನಿಡಿ-34 ರಂತೆ ಎಂ.ಆರ್. ನಲ್ಲಿ ನಮೂದು ಮಾಡಿರುವ

ರೀತಿ ಅವರಿಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಅದನ್ನು ಸೃಷ್ಟಿಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಾವು ಈ ಹಿಂದೆ ದಾಖಲಿಸಿದ ದಾವೆಯಲ್ಲಿ 1 ನೇ ಪ್ರತಿವಾದಿಯವರಿಗೆ ಸೇರಿರುವ ಸ್ವತ್ತನ್ನು ತೋರಿಸಿರುವುದಿಲ್ಲ. ನಿಡಿ-21 ರಂತೆ ಸ್ವತ್ತು ಅವರಿಗೆ ವಿಭಾಗದ ಸಮಯದಲ್ಲಿ ವಿಭಾಗಕ್ಕೆ ಬಂದಿದೆ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಎಂ.ಆರ್. ನಂ-80/1980-81 ರಂತೆ ನಮ್ಮ ಕುಟುಂಬಸ್ಥರ ನಡುವೆ ವಿಭಾಗವಾಗಿದ್ದರೂ ಸಹ ಎಫ್.ಡಿ.ಪಿ.-1/2001 ರಲ್ಲಿ ವಿಭಾಗವಾಗಿದೆ ಎಂದು ದಾಖಲೆಗಳನ್ನು ಸೃಷ್ಟಿಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಮಿಸ್ ನಂ-1/2006, ಮಿಸ್ ನಂ-11/2009 ರಲ್ಲಿ ಮತ್ತು ಎಂ.ಎ-2/2009 ರಲ್ಲಿ ನಾನು ಪಕ್ಷಕಾರನಾಗಿದ್ದೆ ಎಂದರೆ ಸರಿ. ಸದರಿ ಕೇಸ್ ಗಳಲ್ಲಿ ವಕೀಲರ ಮೂಲಕ ನಾನು ಕೇಸ್ ಗಳನ್ನು ನಡೆಸಿರುತ್ತೀರಾ ಎಂದರೆ ಸಾಕ್ಷಿಯು ಮಿಸ್ ನಂ-11/2009 ರಲ್ಲಿ ಮಾತ್ರ ನಡೆಸಿರುತ್ತೇನೆ, ಬೇರೆ ಪ್ರಕರಣಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಮಿಸ್ ನಂ-11/2009 ರಲ್ಲಿ ನ್ಯಾಯಾಲಯದ ಮುಂದೆ ಹಾಜರಾದ ನಂತರ ಮಿಸ್ ನಂ-1/2006 ರಲ್ಲಿ ನಡೆದ ಹರಾಜು ಪ್ರಕ್ರಿಯೆಯನ್ನು ಪ್ರಶ್ನಿಸುತ್ತ ಯಾವ ಕಾರಣಕ್ಕೆ ಮೇಲ್ಮನವಿಯನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ಸದರಿ ಅರ್ಜಿಯಲ್ಲಿ ಪಕ್ಷಕಾರನಾಗಿದ್ದು, ನ್ಯಾಯಾಲಯದಿಂದ ನೋಟೀಸ್ ಅನ್ನು ಪಡೆದುಕೊಂಡಿದ್ದು, ಅದರ ಮುಂದುವರೆದ ಕೇಸ್ ನಲ್ಲು ಸಹ ಭಾಗಿಯಾಗಿದ್ದು, ನನಗೆ ಅದರ ಬಗ್ಗೆ ಮಾಹಿತಿ ಇದ್ದರು ಸಹ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಹರಾಜಿನಿಂದ ಮಾರಾಟ ಆಗಿದ್ದ ಕಾರಣ ನಮ್ಮ ಕುಟುಂಬಸ್ಥರಿಗೆ ಯಾವುದೇ ಅಧಿಕಾರ ಇರಲಿಲ್ಲ, ಆದ ಕಾರಣ ನಾನು ಯಾವುದೇ ಮೇಲ್ಮನವಿಯನ್ನು ಸಹ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

3. ಜಾರಿ ಅರ್ಜಿ-76/2000 ರಲ್ಲಿ ನಡೆದ ವಿದ್ಯಾಮಾನಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಜಾರಿ ಅರ್ಜಿ-76/2000 ಯ ಅರ್ಜಿದಾರರಾದ ನಾಗರಾಜ್ ರವರನ್ನು ಈ ದಾವೆಯಲ್ಲಿ

ಪಕ್ಷಕಾರರನ್ನಾಗಿ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಅರ್ಜಿಯಲ್ಲಿ ಪುಟ್ಟಮ್ಮ ರವರು ಸಹ ಭಾಗವಹಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ–17, 18, 21 ರಿಂದ 27 ರ ದಾಖಲೆಗಳಲ್ಲಿನ ದಾವಾ ಸ್ವತ್ತಿಗೂ ಪ್ರಸ್ತುತ ದಾವಾ ಸ್ವತ್ತಿಗೂ ಯಾವುದೇ ರೀತಿ ಸಂಬಂದ ಇಲ್ಲ ಮತ್ತು ಪ್ರಸ್ತುತ 5 ನೇ ಪ್ರತಿವಾದಿ ಸದರಿ ದಾವೆಗಳಲ್ಲಿ ಪಕ್ಷಕಾರರು ಆ ಕಾರಣ ಅದುಕ್ಕು ಇದಕ್ಕು ಸಂಬಂದ ಇಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯಲ್ಲಿ 5 ನೇ ಪ್ರತಿವಾದಿ ಹರಾಜು ಪ್ರಕ್ರಿಯೆಯಲ್ಲಿ ಖರೀದಿ ಮಾಡಿದ Sale Certificate ಅನ್ನು ರದ್ದು ಮಾಡಬೇಕು ಎಂದು ಪರಿಹಾರವನ್ನು ಕೋರಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದ ಇದಕ್ಕೆ ಸಂಬಂದಿಸಿದ ಯಾವುದೇ ದಾವೆ ಅಥವಾ ಪರಿಹಾರವನ್ನು ಕೇಳಿಲ್ಲ ಎಂದು ನುಡಿಯುತ್ತಾರೆ. ಎಫ್.ಡಿ.ಪಿ.–1/2001 ರಲ್ಲಿ ಭಾಗವಾಗಿದ್ದರೂ ಸಹ ನಿಡಿ–27 ರಂತೆ ಸುಶೀಲ ಮತ್ತು ಸಾವಿತ್ರಮ್ಮರವರು ಚಂದ್ರೇಗೌಡ, ಜಯಮ್ಮ, ದೀಪು, ಸಂತೋಷ್ ಮತ್ತು ಇತರರ ವಿರುದ್ದ ಅಸಲು ದಾವಾ ಸಂಖ್ಯೆ–58/2023 ರಂತೆ ಭಾಗಾಂಶ ಕೋರಿ ದಾವೆಯನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತು ಪ್ರಸ್ತುತ ಸರ್ಕಾರ ಸ್ವಾದೀನಪಡಿಸಿಕೊಂಡಿದೆ ಎಂದರೆ ಸರಿ. ದಾವಾ ಸ್ವತ್ತಿನ ಮೇಲೆ 5 ನೇ ಪ್ರತಿವಾದಿಗೆ ಹಕ್ಕು ಇರುವ ಕಾರಣ ಸರ್ಕಾರದ ಪರಿಹಾರದ ಹಣ ಅವರಿಗೆ ಮಂಜೂರಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಇಲ್ಲದೇ ಇದ್ದರು ಸಹ ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯವನ್ನು ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಹೇ. ಕೇ. ಸ. ಇದೆ.**

**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಸಾಕ್ಷಿದಾರರ ಸಹಿ.** **ಪಾಂಡವಪುರ.**